
# ಕಾನನ

**DECEMBER 2012**

ನಿಸರ್ಗದೆಡೆಗೆ ಪಯಣ



Photography by: Dr. K.V.Gururaja

WILDLIFE
CONSERVATION
GROUP

© W C G

# ಕಾನನ

DECEMBER 2012

ನಿಸರ್ಗದೆಡೆಗೆ ಪಯಣ

## ಲೇಖನಗಳು


* ಕಪ್ಪೆ ಕಮ್ಮಟ – ಅಶೋಕವರ್ಧನ

* ಹಕ್ಕಿಲೋಕ – ಅಶ್ವಥ.ಕೆ.ಎನ್

* ವಿದ್ಯಾರ್ಥಿಗಾಗಿ ವಿಜ್ಞಾನ – ಮುರಳಿ.ಎಸ್

* Hg – ಶಂಕರಪ್ಪ.ಕೆ.ಪಿ




ಅನಿಸಿಕೆ

E-mail: kaanana.mag@gmail.com

ಮುಖಪುಟ: Yellow Bush frog

© W C G



# ಸಂಪಾದಕೀಯ

ಟಿವಿ ವಾಹನಿಗಳು ಬಿತ್ತರಿಸಿದ ಮಹಾಪ್ರಳಯವನ್ನು ನಂಬಿ ಇನ್ನೇನು ಮಹಾಪ್ರಳಯ ಬಂದೇ ಬಿಡ್ತು ಎಂದು ಬಾಯಿ ಬಾಯಿ ಬಡಿದುಕೊಂಡು ಕೊಡಂಗಿಗಳಾದುದ್ದು ಆಯ್ತು, ಪ್ರಳಯವನ್ನೇ ಮುಂದುಡಿದ್ದು ಆಯ್ತು.

ಆದರೆ ಸದ್ದಿಲ್ಲದೆ ನಿಧಾನವಾಗಿ ಆಗುತ್ತಿರುವ ಜಲಪ್ರಳಯ ನಮಗೆ ಕಾಣುತ್ತಿಲ್ಲ. ಕೆರೆ ಕುಂಟೆಗಳಲ್ಲಿ ನೀರು ಕುಂಟಿತಗೊಂಡಿವೆ. ಬಾವಿಗಳೋ ಬತ್ತಿ ತಳ ಕಾಣುತ್ತಿದೆ. ನಾವೇನೋ ಸಾವಿರಾರು ಅಡಿ ಆಳದ ನೀರನ್ನು ಮೇಲೆತ್ತಿ ಬದುಕು ಸಾಗಿಸಲೂಬಹುದು. ಆದರೆ ಕುಂಟೆಗಳ ನೀರನ್ನು ನಂಬಿ ಬದುಕುತ್ತಿರುವ ಜೀವಿಗಳ ಕತೆ ಏನಾಗಬೇಕು? ಇನ್ನು ಭೂಮಿಯ ಜೀವವೈವಿಧ್ಯ ವ್ಯವಸ್ಥೆ ತೀರಾ ಸಂಕೀರ್ಣವಾದುದ್ದು, ಆ ಬೃಹತ್ ಜೀವಜಾಲದ ಒಂದು ಕೊಂಡಿಗೆ ಊನವಾದರೂ ಕಳಚಿದರೂ ಅನಾಹುತ ತಪ್ಪಿದ್ದಲ್ಲ.

ನಮ್ಮ ದುರಾಸೆಗೆ ಐಷಾರಾಮಿ ಜೀವನದ ಲೋಲುಪತೆಗೆ ನಾವು ಬೆಳೆಯುತ್ತಿರುವ ವೇಗಕ್ಕೆ ಜೀವವ್ಯವಸ್ಥೆಯಲ್ಲಿ ನೇರ ಪರಿಣಾಮಗಳ ಪೆಟ್ಟನ್ನು ನಾವು ಅನುಭವಿಸಲೇಬೇಕು ಅಥವಾ ನಾಶವಾಗಲೂ ಬಹುದು. ಇಷ್ಟು ದೊಡ್ಡ ವ್ಯವಸ್ಥೆಯನ್ನು ನಿರ್ಮಿಸಿಕೊಂಡ ಮಾನವರಾದ ನಾವು, ನಮ್ಮ ಹಾಗೂ ಇತರ ಜೀವಿಗಳ ಉಳುವಿಗೆ ಏನು ಮಾಡಬೇಕು ಎಂಬುದನ್ನು ಕೂಡ ಅರಿಯದಂತೆ ದಡ್ಡರಾದ್ದುದ್ದಾದರೂ ಹೇಗೆ? ಎಂದು ಒಮ್ಮೊಮ್ಮೆ ಅನಿಸುತ್ತದೆ.

ಬಿಸಿಲೆಯ ಕಪ್ಪೆಕಮ್ಮಟದ ಪೂರ್ಣ ಚಿತ್ರಣವನ್ನು ಶ್ರೀ ಅಶೋಕವರ್ಧನರವರು **ಮಂಡೂಕೋಪಖ್ಯಾನದ ಎರಡನೇ ಮತ್ತು ಅಂತಿಮ ಭಾಗದಲ್ಲಿ** ಕೊನೆಯ ಕಂತು ಈ ಬಾರಿ ನಿಮ್ಮ ಮುಂದಿದೆ.ಹಾಗೂ *INDIAN INSTITUTE OF SCIENCE* ನ **ಡಾ|| ಕೆ.ವಿ .ಗುರುರಾಜ್** ರವರ *YELLOW BUSH FROG* ನ ಛಾಯಾಚಿತ್ರವು ಕಾನನದ ಮುಖಪುಟದ ಅಂದವನ್ನು ಹೆಚ್ಚಿಸಿದೆ . "ತೆಕೋ ತೆಕ್ ತಕ್ . . . "ಎಂದು ಬೆಳಗು ಬೈಗು ಗಳಲ್ಲಿ ಕೂಗುವ **ಕಾಡುಕೋಳಿ**ಯ ಸುಂದರ ಚಿತ್ರಣವನ್ನು ಹಕ್ಕಿಲೋಕದಲ್ಲಿ ಅಶ್ವಥ್.ಕೆ.ಎನ್ ರವರು ವರ್ಣಿಸಿದ್ದಾರೆ. ಅಣು, ಜೀವ ಹಾಗೂ ಶಕ್ತಿಗಳಿಂದ ನಾವಾದ ಬಗ್ಗೆ ಮತ್ತು ನಾವು ಹುಟ್ಟಿದ್ದು ನಕ್ಷತ್ರದಲ್ಲಿ ಎಂದು ಸಾರುವ **Hg** ಕವನವನ್ನು ಶಂಕರಪ್ಪನವರು ಬರೆದಿದ್ದಾರೆ.

***ಕಾನನ*** **ತನ್ನ ಎರಡನೇ ವರ್ಷದ ಹುಟ್ಟುಹಬ್ಬವನ್ನು ಈ ತಿಂಗಳು ಆಚರಿಸುತ್ತಿದೆ.**

ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.

ಇ-ಮೇಲ್ ವಿಳಾಸ : **kaanana.mag@gmail.com**

**Wildlife Conservation Group**


# ಕಪ್ಪೆ ಕಮ್ಮಟ

## (ಮಂಡೂಕೋಪಖ್ಯಾನದ ಎರಡನೇ ಮತ್ತು ಅಂತಿಮ ಭಾಗ)

- ಮುಂದುವರಿದ ಭಾಗ. . . .



ಮೊದಲ ದಿನದ ತಡಸಂಜೆ, 'ಕಪ್ಪೆ ಬಳಗ' ವಾಹನಗಳನ್ನೇರಿ ಬೀಟೀಸ್ಪಾಟ್‌ನಲ್ಲಿ ತುಸು ವಿಹರಿಸಿತು. ಮಂಜು ಮೋಡಗಳ ಕಡಲಲ್ಲಿ ಶಿಖರ ಶ್ರೇಷ್ಠರು ಮಥನದ ಮೇರುಗಳು. ವನ್ಯಬಳಗದ ಸಮೂಹಗಾನ ದೇವ ಮತ್ತು ರಾಕ್ಷಸ ಬಳಗದ ಉಛ್ವಾಸ ನಿಶ್ವಾಸ. ಈ ಮಹಾನಾಟಕಕ್ಕೆ ಝರಿ ಹೊಳೆಗಳ ಅಬ್ಬರ ವೀಕ್ಷಕರ ನಿಬ್ಬೆರಗಿನ ಘೋಷ! ಅಂದು ಸೂರ್ಯಾಸ್ತವಿಲ್ಲ (ಸೂರ್ಯನನ್ನು ಕಂಡವರೇ ಇಲ್ಲ), ಹಗಲು ಕತ್ತಲಿಗೆ ನಿಧಾನಕ್ಕೆ ಜಾರಿತು. ಅನಂತರ ಎರಡು ಕಿಮೀ ವಾಹನಗಳಲ್ಲೇ ಇಳಿದಾರಿಯಲ್ಲಿ ಹೋಗಿ, ನಿಂತದ್ದು - ಕ್ಷೇತ್ರಕಾರ್ಯಕ್ಕೆ ಆರಿಸಿಕೊಂಡ ಅಶೋಕವನ. ಹಲವರ ಕೈಯಲ್ಲಿ, ಕೆಲವರ ತಲೆ ಪಟ್ಟೆಯಲ್ಲಿದ್ದ ಟಾರ್ಚುಗಳ ಬೆಳಕೋಲಿನಲ್ಲಿ ದಟ್ಟ ಅಡವಿಗೆ ಸಾಲು ಹಿಡಿದು ನಿಧಾನಕ್ಕೆ ನುಗ್ಗಿದೆವು. ಒಟ್ಟು ತಂಡದಲ್ಲಿ ಎಲ್ಲೋ ಮೂರು-ನಾಲ್ಕು ಮಂದಿಯಷ್ಟೇ ಅದೂ ಬೇಸಗೆಯ ಹಗಲಿನಲ್ಲಿ ಒಮ್ಮೆ ಮಾತ್ರ ನೋಡಿ ಅಬ್ಬಾ! ಎಂದ ಕಾಡದು. ಎಲ್ಲರಿಗು ಕಣ್ಣಾಪು ಕಟ್ಟಿದ ಕುದುರೆಯಂತೆ, ಬೆಳಕೋಲಿನ ಛೇದದಲ್ಲಷ್ಟೇ ದೃಷ್ಟಿ. ನೇತು ಬಿದ್ದದ್ದು ಬಳ್ಳಿಯೋ ಹೆಬ್ಬಾವೋ ನಿಶ್ಚಲವಾಗಿರುವುದು ಹೆಬ್ಬಂಡೆಯೋ ಆನೆಯೋ! ಹೀಗೆ ಊಹಾತ್ಮಕ ಭಯಗಳನ್ನು ಅತಿಶಯಗೊಳಿಸುವಂತೆ ಪ್ರತಿ ಹೆಜ್ಜೆಯಲ್ಲೂ ಉರುಳುವ ಕಲ್ಲು, ಹೂಳುವ ಗೊಸರು, ಅಡ್ಡಗಟ್ಟುವ ಕುಂಬು ಮರ, ಪಕ್ಕದಿಂದ ತಟ್ಟಿ ಒರೆಸುವ ಪೊದರು ("ಮುಳ್ಳಿದ್ದೀತು ಹುಶಾರ್") ಇತ್ಯಾದಿ.



ಸುಮಾರು ನೂರು ಮೀಟರ್ ತುಸು ಏರು ಜಾಡು ಮತ್ತೆ ಅಷ್ಟೇ ಇಳಿಜಾಡಿನ ಕೊನೆಯಲ್ಲಿ ನಾವು ಸಣ್ಣ ಹಡ್ಲು (ಹುಲ್ಲು ಬೆಳೆದ ಗೊಸರು ನೆಲ) ತಲಪಿದ್ದೆವು. ಅಲ್ಲಿ ಹರಿಯುವ ಸಾರ್ವಕಾಲಿಕ ತೊರೆಯ ಜಲಾನಯನ ವ್ಯಾಪ್ತಿ ಸಣ್ಣದು. ಹಾಗಾಗಿ ಅದೆಂದೂ ಅಪಾಯಕಾರಿಯಾಗಲು ಸಾಧ್ಯವಿರಲಿಲ್ಲವೆಂಬ ನನ್ನ ಭರವಸೆಯ ಮೇಲೆ ಎಲ್ಲ ಕಪ್ಪೆ ಭೇಟಿಗೆ

ತೊಡಗಿದರು. “ಅದೇನು ವಟಗುಟ್ತೀ” ಎನ್ನುವಲ್ಲಿನ ಮನುಜಕುಲದ ತಿರಸ್ಕಾರದ ಭಾವ, ವಾಸ್ತವವಾಗಿ ಮಂಡೂಕಲೋಕದ ಉತ್ಕಟ ಪ್ರೇಮಗಾನ; ಕರೆದರೂ ಕೇಳದೇ. ಗಾಯನಕ್ಕೆ ಭಾಷೆಯ ಬಂಧವಿಲ್ಲ ಆದರೆ ಭಾವದ ಸ್ತರಗಳಿವೆ ಎನ್ನುವುದು ಇಲ್ಲಿಯೂ ನಿಜವೇ. ವಿವಿಧ ಜಾತಿಯ ಧ್ವನಿಗಳು ಮತ್ತು ತರಂಗಗಳನ್ನು ಕೆವಿಜಿ ತರಗತಿಯಲ್ಲಿ ಧ್ವನಿಮುದ್ರಿಕೆಯಿಂದ ಕೇಳಿಸಿ, ಚಿತ್ರಗಳೊಡನೆ ವಿವರಿಸಿದ್ದರು.



ಹೀಗೆ ಸಮೀಪಿಸುವ ಯೋಗ್ಯ ಸಂಗಾತಿಗೆ ಸ್ಪರ್ಧೆ ಏರ್ಪಟ್ಟಲ್ಲಿ ಅವು ಕಾಲಿನಲ್ಲಿ ನೆಲತಟ್ಟಿ ಪ್ರತಿಸ್ಪರ್ಧಿಯನ್ನು ಎಚ್ಚರಿಸುವುದು, ನಮ್ಮ ಜಟ್ಟಿಕಾಳಗಕ್ಕೆ ಬಿಟ್ಟಿಲ್ಲ. ಅಗತ್ಯ ಬಂದರೆ ಹಿಂಗಾಲು ಚಾಚಿ ಪೌರುಷ ಪ್ರದರ್ಶಿಸುವುದು, ಮುಂದುವರಿದು ಒಂದನ್ನೊಂದು ಒದ್ದು ಕಳೆಯುವುದನ್ನು ವಿಡಿಯೋ ತುಣುಕುಗಳಲ್ಲಿ ಕಂಡು ಬೆರಗಾಗಿದ್ದೆವು. ಆದರೆ ತಂತ್ರಜ್ಞಾನದ ಬಲದಲ್ಲಿ ಮುದಕೊಟ್ಟಿದ್ದ, ಮನವರಿಕೆಯಾಗಿದ್ದ ಆ ಎಲ್ಲ ಮಾಹಿತಿಗಳು ಅಶೋಕವನದ ವಾಸ್ತವದೆದುರು ದಿಕ್ಕೆಟ್ಟು ಕುಳಿತವು. ಸಂತೆಕಟ್ಟೆಯ ಗದ್ದಲಕ್ಕಿಳಿದ ಕಡಸಿನಂತೆ ಹೆಚ್ಚಿನವರು (ಪೆರ್ಚುಗಟ್ಟುವುದು) ಹೌಹಾರುವುದೊಂದೇ ಬಾಕಿ. ತೊರೆಯಂಚಿನಲ್ಲಿ, ಹುಲ್ಲಿನಲ್ಲಿ, ಮರದ ಬುಡದಲ್ಲಿ, ಪೊದರ ಎಲೆಯ ಮೇಲೆ, ಬಿದ್ದ ಗೆಲ್ಲಿನ ಮರೆಯಲ್ಲಿ ಅದೆಷ್ಟು ಗಾಯಕರು, ಅದೇನು ಲಹರಿ. ಗಂಟಲಲ್ಲಿ ಒಂದು ಚೀಲ, ಎರಡು ಚೀಲ ತುಂಬಿಕೊಂಡವರು, ಮಂದ್ರದವರು ತಾರದವರು, ವಿಲಂಬಿತರು, ದ್ರುತದವರು, ಏನು ಕಿರಲು ಏನು ಒರಲು! ಕೆಲವು ಮಾದರಿಗಳನ್ನು ನಮ್ಮವರು ಕೈಸೆರೆ ಮಾಡಿ (ಕಪ್ಪೆಯ ಮುಂಗಾಲೊಂದನ್ನು ಎರಡು ಬೆರಳುಗಳ ನಡುವೆ ಹಗುರಕ್ಕೆ ಒತ್ತಿ ಹಿಡಿದು ಅಂಗೈ ಮೇಲಿ ಬಿಟ್ಟುಕೊಂಡರೆ ಕೊಸರಾಡದೆ ಕೂರುವುದನ್ನು ಕೆವಿಜಿಯೇ ಹೇಳಿಕೊಟ್ಟಿದ್ದರು), ಉಳಿದಂತೆ ಅವಿದ್ದಲ್ಲಿಗೇ ಬೆಳಕೋಲುಗಳನ್ನು ಬಿಟ್ಟು ನೋಡಿದರು, ಗುಣಗಾನ ಮಾಡಿದರು, ಟಿಪ್ಪಣಿಸಿದರು, ಪರಸ್ಪರ ಹೋಲಿಸಿಕೊಂಡರು, ಮಳೆಯ ರಿಯಾಯಿತಿ ಸಿಕ್ಕಲ್ಲೆಲ್ಲ ವಿವಿಧ ಕೋನ, ಬೆಳಕುಗಳಲ್ಲಿ ಕ್ಯಾಮರಾವನ್ನೂ ಚಕುಪುಕು ಮಾಡಿದರು. ಭೇಟಿಯ ಕೊನೆಯಲ್ಲಿ ಸಿಕ್ಕ ಹಸಿರು ತೇಲುಗಪ್ಪೆಯೊಂದಂತೂ ಯಾವ ಸಿನಿಮಾ ತಾರೆಗೂ ಕಡಿಮೆಯಿಲ್ಲದಷ್ಟು ಭಂಗಿಗಳನ್ನೂ ಕೊಟ್ಟು ಅಭಿಮಾನಿಗಳನ್ನೂ ಗಳಿಸಿತು!

ತಿಂಗಳ ಹಿಂದೆ, ಎಂಟು ಆನೆಗಳ ಹಿಂಡೊಂದು, ವಾರ ಕಾಲ, ಅಶೋಕವನದಲ್ಲೇ ಠಿಕಾಣಿ ಹೂಡಿತ್ತು ಎಂದು ಬಿಸಿಲೆ ಹಳ್ಳಿಯಲ್ಲಿ ಹೇಳುವುದು ಕೇಳಿದ್ದೆ. ಮತ್ತೆ ಸಹಜವಾಗಿ ಕಾಳಿಂಗನಿಂದ ಹಿಡಿದು ಎಲ್ಲಾ ವರ್ಗದ ಹಾವುಗಳಂತೂ ಇಲ್ಲಿ ಇರಬೇಕಾದವೇ. ಈ ಎರಡರ ಮುಖಾಮುಖಿ ನಮಗಾಗದಿದ್ದರೆ ಸಾಕು ಎಂದು ಆಶಿಸುವುದು ಮತ್ತು ಅಷ್ಟೇನೂ ಪರಿಣತವಲ್ಲದ ನನ್ನ ಕಿವಿಕಣ್ಣನ್ನು ಆ ಕುರಿತು ಎಚ್ಚರದಲ್ಲಿಡಲು ನಾನು ಪ್ರಯತ್ನ ನಡೆಸಿಯೇ ಇದ್ದೆ. ತೊರೆ, ದರೆ, ಪೊದರು, ಮರವೆಂದು ಬೆಳಕೋಲು ಬಿಟ್ಟು ಕೆದಕುವ ಭರದಲ್ಲಿ ಗುಂಪಿನಿಂದ ಯಾರೂ ಕಳೆದು ಹೋಗಬಾರದಲ್ಲಾ ಎನ್ನುವ ಭಯವೂ ಸ್ವಲ್ಪ ಇತ್ತು. ಆದರೆ ಬಿಟ್ಟುಬಿಟ್ಟು ಸುರಿಯುತ್ತಿದ್ದ ಪಿರಿಪಿರಿ ಮಳೆ, ಆಗೀಗ ಎಲ್ಲೋ ದೌಡಾಯಿಸಬೇಕಿದ್ದ ಮೋಡ ಚೈತನ್ಯ ಉಡುಗಿ ಬಿದ್ದಂತೆ ಮುಸುಕಿ, ಮತ್ತೆದ್ದು ಹೋಗುತ್ತಾ ಒಟ್ಟಾರೆ ನಮ್ಮನ್ನು ಸ್ವಲ್ಪ ನಿರುತ್ತೇಜನಗೊಳಿಸಿದ್ದೂ ಸೇರಿಕೊಂಡಿತು. ಕೇವಲ ಎರಡು ದಿನದ ಅಗತ್ಯಕ್ಕೆ ಕೆಲವರೆಲ್ಲಾ ಕೊಡೆಯಲ್ಲೂ ಅರೆಬರೆ

ಮಳೆಕೋಟುಗಳಲ್ಲೆ ಸುಧಾರಿಸುವ ಮನಸ್ಸು ಮಾಡಿದ್ದರಿಂದ ಕೈಕಾಲುಗಳನ್ನು ಮುಕ್ತವಾಗಿಟ್ಟುಕೊಂಡು ತೊರೆಪಾತ್ರೆ, ಪೊದರ ಸಂದಿಗಳಲ್ಲಿ ನುಗ್ಗಿ ಹೊರಡುವುದು ಕಷ್ಟವೂ ಆಗುತ್ತಿತ್ತು. ಎಲ್ಲಕ್ಕೂ ಹೆಚ್ಚಿಗೆ ಉಳಿದವರಲ್ಲಿ ಹೆಚ್ಚಿನವರಿಗೆ ಕಪ್ಪೆ ನೋಡುವ ಉತ್ಸಾಹದಲ್ಲಿ ಹಾಗೂ ಹೀಗೂ ತಿಪ್ಪರ್ಲಾಗ ಹಾಕಿ ಬಂದದ್ದು ಎಲ್ಲಿಂದ, ಹೋಗುವುದು ಎಲ್ಲಿಗೆ ಎನ್ನುವ ಪ್ರಜ್ಞೆ ತಪ್ಪಿಹೋಗಿತ್ತು. ಕನಿಷ್ಠ ಮಿತ್ರ ಬಳಗದಿಂದ ಕಳೆದುಹೋಗದ ಎಚ್ಚರ ಬೆಳೆದಿತ್ತು! ಕೆಲವರಿಗಾದರೂ ಹಗಲಿನ ಮೋಜಣಿಯನ್ನು ಇದೇ ವಠಾರದಲ್ಲಿ ಮಾಡಬೇಕಿತ್ತು ಎಂದನಿಸಿತು. ಆಗ ಕತ್ತಲಲ್ಲಿ ತುಸು ಹೆಚ್ಚು ಕೈಕಾಲು ಚಾಚಬಹುದಿತ್ತು, ಹೆಚ್ಚು ಧೈರ್ಯವೂ ಬರುತ್ತಿತ್ತೆಂಬ ಅಭಿಪ್ರಾಯ ಮೂಡುವ ಸಮಯಕ್ಕೆ ಗಂಟೆ ಒಂಬತ್ತಾಗಿತ್ತು. ನಿಧಾನಕ್ಕೆ ದಾರಿಗೆ ಮರಳಿ, ವಾಹನ ಸೇರಿ ದಿನದ ಕಲಾಪಗಳಿಗೆ ಮಂಗಳ ಹಾಡಿದೆವು.

ಸಮುದಾಯ ಭವನದಲ್ಲಿ ಗದ್ದಲವೋ ಗದ್ದಲ. ಒತ್ತಿನ ಕೆರೆಗಳೆರಡರ ಕಪ್ಪೆಗಳು ತಮ್ಮನ್ನು ನಿರ್ಲಕ್ಷಿಸಿ ಅತ್ತಿನ ತೊರೆ ಹುಡುಕಿಕೊಂಡು ಹೋದದ್ದಕ್ಕೆ ಧಿಕ್ಕಾರ ಹಾಕಿದ್ದವು. ಬಾನ್ದೇವೀ ಮೋಡದ ಹೊದಿಕೆ ಹೊಚ್ಚಿ, ಹನಿಗಳ ಲಾಲಿ ಹಾಡಿದ್ದು ಪ್ರಯೋಜನಕ್ಕೇ ಬರಲಿಲ್ಲ. ಆದರೆ ನಮಗೋ ಚಂಡಿ ಬಟ್ಟೆಗಳಿಂದ ಬಿಸುಪಿಗೆ ಬದಲಿದ್ದು, ಮೊಂಬತ್ತಿ ಬೆಳಕಿನಲ್ಲಿ ಬಿಸಿಯೂಟ ಮುಗಿಸಿದ್ದು ಅಷ್ಟೇ ಗೊತ್ತು. ಹತ್ತುಮಂಚ, ಹತ್ತು ಹಾಸಿಗೆ ಮಾತ್ರ ಸಮುದಾಯ ಭವನದ ಲೆಕ್ಕದಲ್ಲಿದ್ದರೂ ಇಪ್ಪತ್ನಾಲ್ಕು ನಿದ್ರೆಗೇನೂ ಕೊರತೆಯಾಗಲಿಲ್ಲ. ಇಂದು ಹೊಸ ಅರಿವಿನಲ್ಲಿ, ನನ್ನ ಕನಸಿನ ಲೋಕದಲ್ಲಿ ವಿಕಸಿಸಿದ ಕಥೆಯೇ ಹೊಸತು. ಮಾಟಗಾತಿಯ ಶಾಪದ ನೆಪದಲ್ಲಿ ಕಪ್ಪೆಲೋಕದ ಸಾಹಚರ್ಯ ಒದಗಿದ್ದ ರಾಜಕುಮಾರ, ಊರಿಗೆ ಬಂದು ಸುಖಿಯಾಗಲಿಲ್ಲ. ಮಾಟಗಾತಿಯಿಂದ ರಾಜಕುಮಾರಿಯನ್ನೂ ಸೇರಿಸಿಕೊಂಡು ವರವನ್ನೇ ಪಡೆದು ಮರಳಿ ಕಪ್ಪೆಯಾಗಿ ಕಾಡಿಗೆ ಹೋದ. ಕಥೆ ಸುಂದರ ಪುಸ್ತಕಗಳಲ್ಲಿ ಅಚ್ಚಾಗಿ ಊರಿಗೆ ಬಂತು.



ಸುಮಾರು ನಾಲ್ಕು ಗಂಟೆಯಿಂದಲೇ ಒಬ್ಬೊಬ್ಬರೇ ಎದ್ದು ಸಜ್ಜುಗೊಳ್ಳುತ್ತಲಿದ್ದುದರಿಂದ, ದೇವೇಗೌಡರು ಚಾ-(ಕ್ಷೇತ್ರಕಾರ್ಯಕ್ಕೆ)ಲನೆ ಕೊಟ್ಟಂತಾಯ್ತು. ಬೆಳಗ್ಗಿನ ಚಾರಣ ಸಕಲೇಶಪುರದತ್ತಣ ದಾರಿಯುದ್ದಕ್ಕೆ ಬೆಳೆಯಿತು. ಮಳೆ ಕುಟ್ಟುತ್ತಲೇ ಇತ್ತು. ತುಸು ವಿನೋದ, ತುಸು ವ್ಯಾಯಾಮ (ಮಾರ್ನಿಂಗ್ ವಾಕು ಸಾರ್!) ಇದ್ದರೂ ಕಣ್ಣು ಅಂಚುಗಟ್ಟಿದ ಚರಂಡಿಗಳಲ್ಲಿ, ದರೆ ಇಳಿದು ಬರುವ ತೊರೆಗಳಲ್ಲಿ, ತಗ್ಗಿನ ಗದ್ದೆಗಳಲ್ಲಿ ಅರಸುತ್ತಿದ್ದದ್ದು ಕಪ್ಪೆ, ಕಪ್ಪೆ ಮತ್ತು ಕಪ್ಪೆಯನ್ನೇ. ಗೇಟಿಂದ ಸುಮಾರು ಅರ್ಧ ಕಿಮೀ ದೂರದ ಬಿಸಿಲೆ ಶಾಲೆಯ ಬಳಿಯ ಪೊದರುಗಪ್ಪೆಯೊಂದು ಬಿಟ್ಟುಬಿಡದೇ ಸಂದೇಶ ಕೊಟ್ಟು ಕೆವಿಜಿಯನ್ನು ಸತಾಯಿಸಿತು. ಮುಂದೊಂದು ಬೆಟ್ಟದ ತೊರೆಯಂಚಿನ ಸಸ್ಯರಾಜಿಯಲ್ಲೂ ಕಾಣಬೇಕಾಗಿದ್ದ ಇನ್ನೊಂದೇ ಜಾತಿಯ ಕಪ್ಪೆಯ ಸಂತತಿ ವಿಸ್ತರಣೆಯ ಲಕ್ಷಣಗಳೂ ಸಿಗಲಿಲ್ಲ. (ಹೀಗೇ ಅಪರಾಹ್ನದಂದು ಕೆರೆಯಂಚಿನಲ್ಲೂ ಮತ್ತೊಂದೇ ಜಾತಿಯೂ ಕೈತಪ್ಪಿತು)



ಇವ್ಯಾವವೂ ಕೆವಿಜಿ ಕಾಣದ್ದಲ್ಲ. ಆದರೆ ಶಿಬಿರಾರ್ಥಿಗಳಿಗೆ ಅವಶ್ಯ ದರ್ಶನೀಯ ಎನ್ನುವುದು ಅವರ ಉದ್ದೇಶ. ಹಾಗೆಂದು ಸೋಲೊಪ್ಪುವಲ್ಲಿ ಕೆವಿಜಿ ಅನುದಾರಿಯಾಗಿರಲಿಲ್ಲ. ಥಾಮಸ್ ಆಲ್ವಾ ಎಡಿಸನ್ ವಿದ್ಯುತ್ ಬಲ್ಬ್ ಆವಿಷ್ಕರಿಸುವ ಕಾಲದಲ್ಲಿ ಸಾವಿರಕ್ಕೂ ಮಿಕ್ಕು ವಿಫಲ ಪ್ರಯೋಗಗಳನ್ನು ಮಾಡಿದ್ದನಂತೆ. ಆಗ ಯಾರೋ ಕಾಲೆಳೆಯುವ ಉತ್ಸಾಹಿಗೆ ಎಡಿಸನ್ ಸಂಭ್ರಮದಲ್ಲೇ ಹೇಳಿದ್ದನಂತೆ "ಆ ಸಾವಿರಕ್ಕೂ ಮಿಕ್ಕ ದಾರಿಗಳು ಉದ್ದೇಶಿತ ಸತ್ಯಕ್ಕಲ್ಲ ಎಂದು ಪ್ರಮಾಣವಾದದ್ದೂ ಒಂದು ಸಾಧನೆ." ಕಪ್ಪೆ ಹುಡುಕಾಟದಲ್ಲಿ ಕೈಚೆಲ್ಲುವಾಗ ಗುರುರಾಜರದೂ ಇದೇ ಭಾವ. ನಮ್ಮ ನಡಿಗೆಯ ಕೊನೆಯಲ್ಲೊಂದು ಝರಿಯಲ್ಲಿ ಕಪ್ಪೆಯರಸುತ್ತಿದ್ದಾಗ ಕಾಣ ಸಿಕ್ಕ ಭಾರೀ ಹಸುರು ಕೊಂಬಚ್ಚೇಳು ಮುಂಜಾನೆಯ ಚಾರಣಕ್ಕೊದಗಿದ ಬೋನಸ್ಸು!



ಚಾ ಬಲದ ಚಾರಣ ಒಟ್ಟಾರೆ ಸುಮಾರು ಹತ್ತು ಕಿಮೀಯಷ್ಟು ಲಂಬಿಸಿದ್ದರಿಂದ ತಿಂಡಿ ತಿನ್ನುವಾಗ ಊಟಕ್ಕೆ ಸಮಯದ ಅಂತರ ಹೆಚ್ಚು ಉಳಿದಿರಲಿಲ್ಲ! (ಹಾಗೇ ಹಿಂದಿನ ದಿನದ ಎರಡು ಅವಧಿ ಮತ್ತು ಅಂದಿನ ಚಾರಣದ ಫಲವಾಗಿ ಯಾರಲ್ಲೂ ಒಣ, ಚಂಡಿ ಬಟ್ಟೆಗಳ ಅಂತರವೂ ಹೆಚ್ಚಿರಲಿಲ್ಲ. ಅದಕ್ಕೆ ಸಣ್ಣ ನಿದರ್ಶನ ನನ್ನ ವೇಷ!) ಪೂರ್ವಾಹ್ನದಲ್ಲಿ ಎರಡು ತರಗತಿಗಳು, ಅಪರಾಹ್ನದ ಕೊನೆಯ ಅವಧಿಯಲ್ಲಿನ ಕಲಿಕೆಯ ಮರುಪರಿಶೀಲನೆ



ಬೈಠಕ್ಕುಗಳು ಚೆನ್ನಾಗಿಯೇ ನಡೆಯಿತು. ಮಧ್ಯಾಹ್ನದ ಊಟಾನಂತರ ಒತ್ತಿನ ಕೆರೆಯ ಪರಿಸರದಲ್ಲಿ ಕ್ಷೇತ್ರಕಾರ್ಯವೇನೋ ಯೋಜನೆಯಂತೇ ನಡೆಸಿದೆವು. ಆದರೆ ಆಕಾಶರಾಯರು ಆದಿನ ಅಪೂರ್ವ ಮಂಜು ಮಳೆಯ ವ್ಯವಸ್ಥೆ ಮಾಡಿದ್ದರು.

ನಡು ಹಗಲೂ ದೃಷ್ಟಿ ಐವತ್ತಡಿ ಆಚೆ ಹರಿಯದ ಸ್ಥಿತಿ. ನಮ್ಮ ತಂಡವೇನೋ ಪ್ರಾಮಾಣಿಕವಾಗಿ ಸುಮಾರು ಎರಡು ಗಂಟೆಗಳ ಕಾಲ ಪರದಾಡಿದರೂ ಯಾವುದೇ ವಿಶೇಷ ಲಾಭವಾಗಲಿಲ್ಲ. ಆದರೆ ಅಲ್ಲೂ ಪ್ರಾಕೃತಿಕ ಸತ್ಯಗಳನ್ನು ಅವುಗಳ ಸಮಗ್ರತೆಯಲ್ಲೇ ಕಂಡುಕೊಳ್ಳಬೇಕು ಎನ್ನುವ ಸತ್ಯ ದರ್ಶನವಾದದ್ದೂ ಕಮ್ಮಟದ ಒಂದು ಪಾಠ. ಅಭಯಾರಣ್ಯಗಳ ಬಾಗಿಲಿನಲ್ಲಿ ನೂರಿನ್ನೂರು ರೂಪಾಯಿ ಬಿಸಾಡಿ, ಜೀಪಿನಲ್ಲಿ ಹೀಗೆ ಹೊಕ್ಕು ಹಾಗೆ ಹೊರಡುವ ಶೇಕಡ ತೊಂಬತ್ತು ಪ್ರವಾಸಿಗಳಿಗೆ ಅರಿವಿಗೇ ಬರದ ವಿಚಾರವಿದು. ಅಂಥಾ ಜನಗಳ



ಪ್ರತಿನಿಧಿಯಾಗಿಯೇ ಮೇಲೇರಿ ಸರಕಾರ ನಡೆಸುವ ಬಹುತೇಕ ಮಂತ್ರಿ ಮಹೋದಯರಿಗೂ ಹೊಳೆಯದ ಸತ್ಯವಿದು. ಹಾಗಾಗಿ ಇಂಥ ಅನಾಚಾರಗಳ ಮೊತ್ತಕ್ಕೊಂದು ಎಚ್ಚರ ಕೊಡಲು ಸಾಕ್ಷಾತ್ ಪರಮೋಚ್ಚ ನ್ಯಾಯಾಲಯವೇ ವ್ಯಾಘ್ರಧಾಮಗಳ ಪ್ರವೇಶವನ್ನು ಸಂಪೂರ್ಣ ನಿಷೇಧಿಸುವ ದೊಡ್ಡ ಹೆಜ್ಜೆಯಿಡಬೇಕಾಯ್ತು! ಆ ನಿಟ್ಟಿನಲ್ಲಿ ನಮ್ಮಲ್ಲಿ ಯಾರೂ ವ್ಯಗ್ರಗೊಳ್ಳದೇ ಇದ್ದುದನ್ನು ನೆನಪಿಸಿಕೊಂಡರೆ ಕಮ್ಮಟ ನೂರಕ್ಕೆ ನೂರು ಯಶಸ್ವೀ ಅನಿಸಿತ್ತು. ಡಾ| ಕೆವಿ ಗುರುರಾಜರ ದಕ್ಷತೆ, ಶಿಬಿರಾರ್ಥಿಗಳ ಶ್ರದ್ಧೆ ಪರಸ್ಪರ ಕೃತಕೃತ್ಯತೆಯನ್ನು ಕೊಟ್ಟಿತು. ಸಂಜೆ ಸುಮಾರು ಐದು ಗಂಟೆಯ ಅಂದಾಜಿಗೆ ಎಲ್ಲ ಬಂದಂತೆಯೇ ಮರಳಿದೆವು.

ನನ್ನ ಕಾಲಕ್ಕೆ ಒಂಬತ್ತನೇ ತರಗತಿಗೇ ಐಚ್ಛಿಕಗಳನ್ನು ಆಯ್ದುಕೊಳ್ಳುವ ಪಾಠಕ್ರಮ ಇತ್ತು. ಆಗ ನನ್ನ ಆಯ್ಕೆ ಪೀಸೀಬಿ (ಭೌತ, ರಸಾಯನ ಮತ್ತು ಜೀವವಿಜ್ಞಾನ). 'ಬಿ' ಪ್ರಯೋಗಾಲಯದಲ್ಲಿ ಕಪ್ಪೆ ಕತ್ತರಿಸಲು ಕೊಡುತ್ತಾರೆ ಎನ್ನುವುದು ನನಗಂತೂ ಬಹಳ ದೊಡ್ಡ ಆಕರ್ಷಣೆ. (ಅಂದು ಕೊಂಡ ಡಿಸೆಕ್ಷನ್ ಬಾಕ್ಸಿನ ಒಂದು ಕತ್ತರಿ ಮೂವತ್ತಾರು ವರ್ಷಗಳ ಅತ್ರಿ ಸೇವೆ ಮಾಡಿ, ಇಂದೂ ನನ್ನಲ್ಲಿ ಬಳಕೆಯಲ್ಲಿದೆ) ಅಂದು (ಬಹುಶಃ ಅಧ್ಯಾಪಕರು) ನಿಶ್ಚೇಷ್ಟಿತ ಕಪ್ಪೆಯನ್ನು ಅಂಗಾತ ಹಲಿಗೆಯ ಮೇಲೆ ಮಲಗಿಸಿ, ನಾಲ್ಕೂ ಕಾಲನ್ನು ಚಾಚಿ ಆಣಿ ಬಡಿದು, ಅಡ್ಡ ನೀಟ ಕೊಯ್ದು (ಪರಿಣತನಿಗೂ ಮರುಜೋಡಿಸಲು ಸಾಧ್ಯವೇ ಇಲ್ಲದಂತೆ, ಸಾಯಿಸಿ) ಏನೋ ಒಂದಷ್ಟು ವಿವರ ಸಂಗ್ರಹಿಸಿದ್ದಿರಬೇಕು. ಆದರೆ ನನಗಿಂದೂ ನೆನಪಿನಲ್ಲಿ ಉಳಿದಿರುವುದು ಅದರ ಪುಟ್ಟ ಹೃದಯ. ತರಗತಿ ಮುಗಿದು ಹೊರಡುವಾಗಲೂ ಗಾಜಿನ ಬಟ್ಟಲೊಳಗದು, ಹೊಕ್ಕು ಹೊರಡುವ ರಕ್ತದಿಂದ ಹಿಡಿದು ಎಲ್ಲಾ ಪೂರಕ ದ್ರವ, ಅಂಗಾಂಗಗಳಿಂದ ದೂರಾಗಿದ್ದರೂ ಮಿಡಿಯುತ್ತಲೇ ಇತ್ತು! ಪ್ರಸ್ತುತ ಕಮ್ಮಟದಲ್ಲಿ ಇಪ್ಪತ್ತಕ್ಕೂ ಮಿಕ್ಕು ವೈವಿಧ್ಯಮಯ ಕಪ್ಪೆಗಳ ಉಲ್ಲೇಖವಾಗಿದೆ. ಸ್ವತಃ ಅಭ್ಯರ್ಥಿಗಳೇ ಹದಿನಾಲ್ಕು ಮಾದರಿಗಳನ್ನು ಕಂಡು, ಮುಟ್ಟಿ, ದೇಹ ಲಕ್ಷಣಗಳ ಟಿಪ್ಪಣಿ ಮಾಡಿ, ಚಿತ್ರ ಹಿಡಿದು ಸಂತೋಷಿಸಿದ್ದಾರೆ. ಕೋಡಂಗಿ ವೇಷ ಹಾಕಿ, ಕಪಟನಾಟಕದಲ್ಲಿ, ಒಣ ಪ್ರತಿಜ್ಞೆಗಳಲ್ಲಿ ಓರ್ವ ನಿಜ ಸಂರಕ್ಷಣಾವಾದಿಗೆ ದಕ್ಕದ ಗುಣಗ್ರಾಹೀ ಹದ ಇಲ್ಲಿ ಎಲ್ಲರಿಗೂ ಒದಗಿತ್ತು. ನಮ್ಮಲ್ಲೇ ಒಬ್ಬ ಟೆಕ್ಕಿ "ಸಂಶೋಧನೆಗೆ ನಮಗೆ ಡಿಗ್ರಿ ಇಲ್ವಲ್ಲಾ" ಎಂದು ಅನುಮಾನ ತೋಡಿಕೊಂಡ. ವಿಜ್ಞಾನದ ಎತ್ತರಕ್ಕೇರುವಲ್ಲಿ ಎಷ್ಟೋ ಸ್ಮರಣೀಯ ಸೋಪಾನಗಳನ್ನು ಕಟ್ಟಿದವರು ಸಹಜ ಆಸಕ್ತರು; ಅನ್ಯ ಲಾಭಗಳ (ಗೌರವ, ಪ್ರಶಸ್ತಿ, ಪುರಸ್ಕಾರ, ವೃತ್ತಿಲಾಭ ಇತ್ಯಾದಿ) ಲಕ್ಷ್ಯವಿಲ್ಲದೇ ನಡೆದವರು. ಸಲೀಂ ಆಲಿ, ರೋಮುಲಸ್ ವಿಟೇಕರ್, ಉಲ್ಲಾಸ ಕಾರಂತಾದಿಗಳು ಗಳಿಸಿದ್ದ ಪ್ರಮಾಣೀಕೃತ ವಿದ್ಯಾರ್ಹತೆಗೆ (ಡಿಗ್ರಿ) ಭಿನ್ನವಾದ ಸಾಧನೆಗಳಿಗಾಗಿ ಇಂದು ಸ್ಮರಣೀಯರಾಗಿದ್ದಾರೆ. 'ಆಸಕ್ತಿಯಿಂದ ಹೋಗಿ, ನೋಡಿ, ಎಷ್ಟು ಪ್ರಾಥಮಿಕ ಅನ್ನಿಸಿದರೂ ಪ್ರಾಮಾಣಿಕ ದಾಖಲೀಕರಣ ನಡೆಸಿ ಮತ್ತು ಅನುಕೂಲ ಒದಗಿದಷ್ಟು ಸಾರ್ವಜನಿಕಗೊಳಿಸಿ' ಎನ್ನುವುದು ಕಪ್ಪೆ ಕಮ್ಮಟದ ಕೊನೆಯಲ್ಲಿ ಮುಖ್ಯ ಶ್ರುತಿಯಾಗಿ ಉಳಿಯಿತು. ಎಲ್ಲ ಜೀವ ಸಂಬಂಧಗಳಿಂದ ಕಡಿದಿಟ್ಟರೂ ಮಿಡಿಯುವ ಕಪ್ಪೆ ಹೃದಯವೇ ನಮಗೆ ಸಂಕೇತ, ಕತ್ತಲ ಕಾಡಿನ ಅಸಂಖ್ಯ ವಟರ್, ಗೊಟರ್, ಟಿಕ್, ಟ್ರೋಂಯ್‌ಗಳು ಅರ್ಥಪೂರ್ಣ ಸಾಹಿತ್ಯ!



# ಹಕ್ಕಿ ಲೋಕ

* ಕಾಡುಕೋಳಿ ಕೆಂಪ

**ವೈಜ್ಞಾನಿಕ ಹೆಸರು:** ***Gallus sonneratii***

**ಇಂಗ್ಲೀಷ್ ಹೆಸರು:** **Grey Junglefowl**



ಕಾಡಿನ ಪಕ್ಕದಲ್ಲೇ ಮನೆ, ಐನೂರು-ಆರ್ನೂರು ಎಕರೆಯಷ್ಟು ದೈತ್ಯಕಾರದ ಸರ್ವೆ ಮರ(ಗಾಳಿಮರ)ಗಳು ನಿತ್ಯಹರಿದ್ವರ್ಣ ಕಾಡುಗಳಂತೆ ಮುಗಿಲಬ್ಬರಕ್ಕೆ ಬೆಳೆದು ನಿಂತಿದ್ದವು. ವರ್ಷಒಂಬ್ಬತ್ ಕಾಲನೂ ಸುಯ್ಯಿ. . .! ಎಂಬ ಶಬ್ಧ ಕೇಳಿ ಕೇಳಿ ನಮಗೆ ರೂಡಿಯಾಗಿ ನೆಮ್ಮದಿಯಿಂದ ನಿದ್ದೆಗ್ಯೆಯುತ್ತಿದ್ದೆವು. ಹೊಸದಾಗಿ ಬರುವ ನೆಂಟರಿಗೆ ಈ ಶಬ್ಧ ದಿಗಿಲು ಬರೆಸುವಂತೆ *ಸುಂಯ್ಯಿ. . .ಸುಂಯ್ಯಿ. . .ಸುಂಯ್ಯೋ. . .*ಎನ್ನುತ್ತಾ ನಿದ್ದೆ ಬಾರದೆ ರಾತ್ರಿಯೆಲ್ಲ ದೆವ್ವಗಳ ಕನಸ್ಸುಗಳಲ್ಲಿ ಲೀನವಾಗಿ ಬೆಚ್ಚುಬಿದ್ದು ದಿಡಿರನೇ ಎದ್ದು *'ಏನು ಶಬ್ಧ ಇದು'*ಎಂದು ಕೇಳುತ್ತಿದ್ದರು. ಅದಕ್ಕೆ ಈ ಮರಗಳಿಗೆ ಗಾಳಿಮರಗಳೆಂದು ಹೆಸರು.

ಈ ಗಾಳಿಮರಗಳು ಮುಗಿಲು ಮುಟ್ಟಿ ಸುಮಾರು ವರ್ಷಗಳೇ ಕಳೆದು ಹೋಗಿದ್ದವು. ಎತ್ತರ ಎತ್ತರಕ್ಕೆ ಬೆಳೆದು ನಿಂತಿದ್ದ ಮರಗಳು ಸೂರ್ಯನ ಕಿರಣಗಳನ್ನು ಬಿಡದೆ ಹಗಲ್ಲಲ್ಲೂ ಕಗ್ಗತ್ತಲಾದಂತೆ ಭಾಸಾವಾಗುತ್ತಿತ್ತು. ಕೆಳಗೆ ನೆಲದ ಮೇಲೆ ಬಿದ್ದಿರುವ ಒಣಸೊಪ್ಪನ್ನು ನೀರುಕಾಯಿಸಲು ಗುಡಿಸಿತರಬೇಕಿತ್ತು. ನಾನು ಚಿಕ್ಕವನಾದ್ದರಿಂದ ಆ ಸುಯ್ಯಿ. . .ಎನ್ನುವ ಗಾಳಿಗೆ ಕತ್ತಲಿಗೆ ಹೆದರುತ್ತಿದ್ದೆ . ಅಷ್ಟೆ ಅಲ್ಲದೆ ಈ ತೋಪು ಸಕಲ ಮೃಗ-ಜಂತುಗಳಿಗೆ ಮನೆಯಾಗಿತ್ತು. ಹೊಲಕುಯ್ಲು ಕಾಲದಲ್ಲಿ ಕಾಡಿನಿಂದ ಬರುವ ಆನೆಗಳ ಹಿಂಡು ಊರುಗಳ ಕಡೆ ಗೂಳೇ ಹೊರಟು ಎರಡು-ಮೂರುದಿನವಾದರು ಕಾಡು ಸೇರದೆ ಸುತ್ತಮುತ್ತಲ ಹಳ್ಳಿಯ ಜನರ ಬಾಯಲ್ಲಿ ಉಗಿಸಿಕೊಳ್ಳುತ್ತಾ ಈ ಸರ್ವೆತೋಪಿನಲ್ಲಿ ಠಿಕಾಣಿ ಹೂಡುತ್ತಿದ್ದದ್ದು ಸೊಪ್ಪು ಗುಡಿಸುವ ಹಾಳುಗಳಿಗೆ ದಿಗಿಲು ಬರಿಸುತ್ತಿತ್ತು.

ವಾಜರಗುಡಿಸಲ ಹುಲ್ಲುಮನೆ-ರಾಮಚಾರಿ ಕುರಿಮೇಯಿಸಲು ಹೋಗಿದ್ದಾಗ ಹೆಬ್ಬಾವು ಕುರಿಯನ್ನು ಹಿಡಿದು ನುಂಗಿದ್ದು!, ಊರಿನವರು ಆ ಕಡೆ ಕುರಿಕಾಯುವುದ್ದನೇ ನಿಲ್ಲಿಸಿಬಿಟ್ಟರು ಬಿಡಿ. . .! ಸಂಜೆಯಾದಂತೆ ಆ ಕಗ್ಗತ್ತಲಿನ



ಕಾಡಿನಲ್ಲಿ ನರಿಗಳು ಊಳಿಡುತ್ತಿದ್ದದ್ದು ಮಕ್ಕಳಿಗೆ ಬೆಚ್ಚಿಬೀಳುವಂತೆ ಮಾಡುತ್ತಿತ್ತು. ಬೆಳಗ್ಗೆ ಮಂಜು ಮುಸುಕಿದಾಗ ಕಾಡುಕೋಳಿಗಳ *‘ತೆಕೊ. . .ತೆಕ್ ತೆಕ್’* ಎಂಬ ಗಲಾಟೆಯನ್ನು ಕೇಳುವ ಬೇಟೆಗಾರರಿಗೆ ಬಾಯಲ್ಲಿ ನೀರೂರುತ್ತಿತ್ತು! ಸುಮಾರು ಎರಡ್ಮೂರು ಕೆಜಿ ತೂಗುವ ಕಾಡುಕೋಳಿಗಳು ಊರುಕೋಳಿಯಂತೆಯೇ ಇದ್ದು, ಬಣ್ಣದಲ್ಲಿ ಏಕತೆಯನ್ನು ಸಾರುತ್ತವೆ. ಕಣ್ಣಿನ ಸುತ್ತ ಕೆಂಪ್ಪಿದ್ದು, ಗದ್ದದ ಕೆಳಗೆ ಕೆಂಪು ಗಂಗೆದೊಗಲು, ಕಂದು ರೆಕ್ಕೆಯ ತುದಿ ಕಪ್ಪು, ಬಾಗಿದ ಬಾಲದ ಗರಿಗಳು, ಪುಕ್ಕಗಳಿಲ್ಲದ ಕೆಂಪು ಜುಟ್ಟು, ಹಳದಿ ಕೊಕ್ಕು ಮತ್ತು ಕಾಲುಗಳು. ಕತ್ತಿನ ಮೇಲೆ ಹಳದಿ ಚುಕ್ಕಿಗಳು ಮಣ್ಣಿಗಳಂತೆ ಕಾಣುತ್ತವೆ. ಹೆಣ್ಣು ಹಕ್ಕಿಗೆ ಉದ್ದ ಬಾಲದ ಗರಿಗಳು ಇರುವುದಿಲ್ಲ. ಕಾಡುಕೋಳಿಯು ನಾಟಿಕೋಳಿಯಂತೆ ಬಹಳ ರುಚಿ. ಈಗ ಬೇಟೆ ಹೆಚ್ಚಾಗಿ ಅಪಾಯದಂಚಿಗೆ ತಲುಪಿದೆ.

ಸರ್ವೆಮರಗಳಲ್ಲಿನ ಎಲೆಗಳು ಹಣ್ಣಾಗಿ ಉದುರಿಬಿದ್ದು ಸುಮಾರು ವರುಷಗಳ ಶೇಖರಣೆ ಆಗಿದ್ದರಿಂದ ಸೊಪ್ಪಿನಲ್ಲಿ ಹಲವಾರು ಜಾತಿಯ ಕೀಟಗಳು ಸೇರಿಕೊಂಡು ಗೊಬ್ಬರ ಮಾಡುವಂತಹ ಕೀಟಗಳು ಕೋಳಿಗಳಿಗೆ ಹಬ್ಬದೂಟದ ಕಜ್ಜಾಯ ಇದ್ದಹಾಗೆಯೇ, ಯಾವಾಗಲೂ ಸರ್ವೆತೊಪಿನಲ್ಲಿ ಕೆಕೇ ಹಾಕುತ್ತಾ ಅಲೆದಾಡುತ್ತಿದವು. ಇದು ಶಿಕಾರಿದಾರರ ಕಣ್ಣಿಗೆ ಬಿದ್ದು ದಿನಾಲೂ ಕಾಡುಕೋಳಿಗಳನ್ನು ಎಡಬಿಡದೆ *ಡಂ. . .*ಎನ್ನಿಸಿ ಭಕ್ಷಿಸಬೇಕೆನ್ನಿಸುತ್ತಿತ್ತು. ಅವುಗಳನ್ನು ದೆವ್ವದ ಹಾಗೆ ಆ ಗವ್ವಗತ್ತಲೆಯ ಜಗತ್ತಿನಲ್ಲಿ ಬೇಟೆಮಾಡುವುದು ಅಸಾಧ್ಯದ ಕೆಲಸ ಅನ್ನಿಸುತ್ತಿತ್ತು.

ಮನೆಗೆ ಅಣ್ಣ ಅದೆಲ್ಲಿಂದಲೋ ತಂದು ಸಾಕಿದ್ದ ನಾಯಿ ಕಂದು ಬಣ್ಣದಾದ್ದರಿಂದ ಎಲ್ಲರೂ ಕೆಂಪ ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ನಾಯಿ ಬಲು ಚುರುಕು, ಕೆಂಪ ಬಾ ಎಂದರೆ ಬರುತ್ತಿತ್ತು. ಹೋಗು ಎಂದರೆ ಹೋಗುತ್ತಿತ್ತು, ಕುಳಿತಿಕೋ ಎಂದರೆ ಕೂರುತ್ತಿತ್ತು, ಓಡು ಎಂದರೆ ಓಡುತ್ತಿತ್ತು. ಮನೆಯವರ ಬಳಿ ಮುದ್ದುಮುದ್ದಾಗಿ ಸಲಿಗೆಯಾಗಿತ್ತು. ಪ್ರತಿದಿನ ಬೆಳಗ್ಗೆ ಅಣ್ಣನ ಜೊತೆ ಕಾಡಿನ ಕಡೆ ವಾಕಿಂಗ್ ಹೋಗುತ್ತಿತ್ತು, ಅಣ್ಣನಂತೆಯೇ ಬೇಟೆಯಲ್ಲಿ ಬಲು ಚುರುಕು.

ರಾತ್ರಿ ಮೂರಾಗಿರಬೇಕು ದೂರದಲ್ಲೆಲ್ಲೋ ಡಂ. . . ಎಂಬ ಸದ್ದು ಮಲಗಿದ್ದ ನನಗೆ ಅಲೆ ಅಲೆಯಾಗಿ ಕೇಳಿಸಿ, ಯಾರೋ ಮೊಲವೂ, ಹಂದಿಯೋ ಹೊಡೆದಿರಬೇಕು ಎಂದು ಸುಮ್ಮನಾದೆ. ಮತ್ತೆ ಸ್ವಲ್ಪ ಹೊತ್ತು ಅದ ಮೇಲೆ 'ಡಂ. . .'ಅಂತು ಬೆಳಗ್ಗೆ ಗಂಟೆ ಐದಿರಾಬೇಕು. ಅಣ್ಣನ ಹಾಸಿಗೆಯನ್ನು ನೋಡಿದರೆ! ಅಣ್ಣ ಇರಲ್ಲಿಲ್ಲ ಅನುಮಾನ ಬಂತು ಹೊರಗೆ ಹೋಗಿ *'ಕೆಂಪ. . .ಕೆಂಪ. . .'*ಎಂದು ಕರೆದೆ ಕೆಂಪನ ಸುಳಿವು ಇರಲ್ಲಿಲ್ಲ, ಖಚಿತವಾಯಿತು *ಡಂ . . .*ಎಂಬ ಶಬ್ಧ ಇವರದೆ ಎಂದು. ಬೆಳಗ್ಗೆ ಅಣ್ಣ ದುರ್ಗನೊಡನೆ ಹಂದಿಯನ್ನು ಬೆಂಕಿಯಲ್ಲಿ ಹಾಕಿ ತಿಯ್ಯುತಿದ್ದರು, ಕೆಂಪ ಬಾಲವನ್ನು ಅಲ್ಲಾಡಿಸುತ್ತಾ ಬಹಳ ಮುತುವರ್ಜಿಯಿಂದ ನನ್ನನ್ನು ನೋಡಿ ಕುಣಿದು ಕುಪ್ಪಳಿಸಿತು. ದುರ್ಗ ಕೆಂಪನ ಪರಾಕ್ರಮವನ್ನು ವರ್ಣಿಸುತ್ತಿದ್ದ ' *ರಾತ್ರಿಬ ಕೆಂಪ ಇಲ್ಲ ಅಂದಿದ್ರೇ, ಹಂದಿ ಎಲ್ಲಿ ಸಿಕ್ತಿತ್ತು! ನಾನೇನೋ ಗುರಿಯಿಟ್ಟೆ, ಆದ್ರೆ ಗುರಿ ಸ್ವಲ್ಪ ಮಿಸ್ಸಾಗಿ ತೋಡೆಗ್ ಬಿದ್ದು ಓಡೊಯ್ತು, ಅಷ್ಟೆ ಅನ್ಕೊಂಡೆ ಆದ್ರೆ ಕೆಂಪ ಹಂದಿ ಎಲ್ಲೋದ್ರು ಬಿಡದೆ ಅಡ್ಡಗಟ್ಟಿ ನಿಲ್ಸದ ಮೇಲೇನೇ ಹಂದಿನಾ ಓಡೆಯಾಕಾಗಿದ್ದು'* ಎಂದು ಕಣ್ಣು ಬಾಯಿಯನ್ನು ಹುಬ್ಬಿಸಿ ಹೇಳಿದ.

ಒಮ್ಮೆ ಅಣ್ಣ ಬೆಳಗ್ಗೆ ಬಯ್ತಾ. . .! *'ಕೆಂಪಾ. . .ಕೆಂಪಾ. . .ಕೆಂಪಾ. . .!'* ಎಂದು ಕೂಗುತ್ತಿದ್ದ. ಕೆಂಪನ ಸುಳಿವು ಇರಲ್ಲಿಲ್ಲ, *'ಎಲ್ಲೋಯ್ತು ಇದು'*ಎಂದು ಬೆಳಗ್ಗೆ ವಾಕಿಂಗ್ ಹೊರಟುಹೋದ. ಮನೆಯ ಪಕ್ಕದಲ್ಲೇ ಬೆಳೆದ್ದಿದ್ದ ಹುಲ್ಲಿನಲ್ಲಿ ಅದೇನನ್ನೋ ಮಾಡುತ್ತಿತ್ತು. ಹತ್ತಿರ ಹೋಗಿ ನೋಡಿದರೆ ಕೋಳಿಯ ಪುಕ್ಕಗಳನ್ನು ಕರೆಯುತ್ತಿತ್ತು. *'ತೋ ಇದ್ರ. . .!, ಕೋಳಿ ಇಡ್ಕೊಬಂದದೆ'* ಎಂದು *'ಏ ಬಾ. . .ಕೆಂಪಾ. . .'*ಎಂದೆ ಅದು ನಾನು ಕರೆದದ್ದು ನೋಡಿ ಕೋಳಿಯನ್ನು ಬಾಯಲ್ಲಿ ಕಚ್ಚಿಕೊಂಡು ಓಡಿಹೋಯ್ತು. ಅಣ್ಣ ಬಂದ ಮೇಲೆ *'ಯಾರ್ದೋ ಕೋಳಿ ಇಡ್ಕೊಬಂದಿದೆ ನೋಡು ಅದು'* ಎಂದು ಹೇಳಿದೆ. *'ಹೌದ. . .? ಅದ್ಕೆ ಅದು*



*ಬೆಳಗ್ಗೆ ಚಕ್ಕರ್ ಹಾಕಿದ್ದು'* ಎಂದು ಕೆಂಪನನ್ನು ಕರೆಯುತ್ತಾ ಹುಡುಕುತ್ತಿದ್ದ. ಪಕ್ಕದ ಪೊದೆಯಲ್ಲಿ ಸೇರಿಕೊಂಡು ತಿಂತ್ತಿತ್ತು. ಬಯ್ದು ಗದರಿಸಿ ಒಳಗೆ ನುಗ್ಗಿ ಎಳೆತಂದು ನೋಡಿದರೆ ಕಾಡುಕೋಳಿ!, ಹಾಳಾಗಿ ಹೋಗ್ಲಿ ಬಿಡು ಎಂದು ಸುಮ್ಮನಾದ, ಮಾರನೇ ದಿನ ಕೆಂಪ ಜಪ್ಪೋ ಎಂದರು ಅಣ್ಣನ ಜೊತೆ ವಾಕಿಂಗ್ ಹೋಗದೆ ಆ ಗವ್ವಗತ್ತಲೆಯ ಸರ್ವೆಮರಗಳ ಕಾಡಿನ ಕಡೆ ಓಡಿಹೋಗುತ್ತಿತ್ತು. ಅಣ್ಣ *'ಅದ್ರ ಮನೆ ಕಾಯೋಗ ರುಚಿ ನೋಡ್ತು, ಅದ್ಕೆ ಬರೋದಿಲ್ಲ ಅಂತದೆ'* ಎಂದು ಬಯ್ಯುತ್ತಾ. . .ಬಂದೂಕು ತೆಗೆದುಕೊಂಡು ಅದರ ದಾರಿಯನ್ನೇ ಹಿಡಿದು ಹೊರಟರು.

ನಡು ತೋಪಿನ ಕತ್ತಲ ಪೊದೆಗಳೊಳಗೆ ನುಗ್ಗಿ ನೆಲದ ಮೇಲೆ ಉದುರಿ ಬಿದ್ದಿರುವ ತರಗೆಲೆಗಳನ್ನು ಕೆದರಿ ಮೇಯುತ್ತಿರುವ ಕಾಡುಕೋಳಿಗಳನ್ನು ಎಬ್ಬಿಸುತ್ತಿತ್ತು. ಹೊರಗೆ ಅಣ್ಣನ ಬಳಿ ಬಂದು ಬಾಲವನ್ನು ಆಡಿಸುತ್ತ ಓಡೆಯುವಂತೆ ಸಾತ್ ನೀಡುತ್ತಿತ್ತು. ಹಂದಿ, ಮೊಲಗಳನ್ನು ರಾತ್ರಿ ವೇಳೆ ಕಾಡಿನ ಆನೆಗಳು ಬರುವ ದಾರಿಯಲ್ಲಿ, ಚಿರತೆಯಂತಹ ಕ್ರೂರಮೃಗಗಳ ನಡುವೆ ಸಾಯುವುದಕ್ಕಿಂತ, ಹಗಲಲ್ಲಿ ಬಹಳ ಸುಲಭವಾಗಿ ಯಾಕೆ ಕೋಳಿಬಾಡು ತಿನ್ನಬಾರದು ಎಂಬ ಉಪಾಯ ಹೊಳೆದು ದುರ್ಗನ ಜೊತೆಸೇರಿ ಕಾಡು ಕೋಳಿಗಳನ್ನು ಬೇಟೆಯಾಡುವ ಕಲೆಯನ್ನು ಕಲಿಸಿದ್ದು ಕೆಂಪನಿಗೆ ಸೇರಬೇಕಾದ ಬಿರುದು!.


ಅಂದೊಂದು ದಿನ ಡಿಸೆಂಬರಿನ ಚಳಿಗಾಲ ಬೆಳಗ್ಗೆ ಕಾಡೆಲ್ಲ ಮಂಜು ಮುಚ್ಚಿತ್ತು, ಪೂರ್ವ ದಿಗಂತದಲ್ಲಿ ಮಂಜಿನ ಮೋಡದಲ್ಲಿ ಸೂರ್ಯಮೂಡುತ್ತಿದ್ದು, ಅಣ್ಣನ ಹಿಂದೆ ಕೆಂಪ ಕಾಡಿನ ಕಡೆ ನಡೆಯುತ್ತಿದ್ದ. ಎಲ್ಲೋ ಕಾಡಿನ ಬೇಲಿ-ಪೊದೆಯೊಳಗೆ ಅವಿತು ಕುಳಿತ್ತಿದ್ದ ಚಿರತೆ ಚಂಗನೆ ಹಾರಿ ಕೆಂಪನ್ನನ್ನು ಎತ್ತಿಕೊಂಡು ಓಡುತ್ತಿತ್ತು. ಕೆಂಪಾ ಜೋರಾಗಿ ಚೀರುತ್ತಿತ್ತು! ಅಣ್ಣನಿಗೆ ಕೈಕಾಲು ಆಡದೆ ಹಿಂದೆಯೇ ಓಡುತ್ತಾ ಕೈಗೆ ಸಿಕ್ಕ ಕಲ್ಲುಗಳಿಂದ ಎಸೆದು ಕಷ್ಟಪಟ್ಟು ಕೆಂಪನ್ನನ್ನು ಚಿರತೆಯ ಬಾಯಿಂದ ಬಿಡಿಸಿಕೊಂಡು ಬಂದ. ಕೆಂಪನ ಕತ್ತಿಗೆ ಬಲವಾಗಿ ಪೆಟ್ಟುಬಿದ್ದಿತ್ತು. ಕೆಂಪಾ ಊಟಬಿಟ್ಟು ಸಾಯುವ ಸ್ಥಿತಿಯಲ್ಲಿ ನರಳುತ್ತಿರಬೇಕಾದರೆ ಡಾಕ್ಟರ್ ಬಂದು ಇಂಜಕ್ಷನ್ ಕೊಟ್ಟು ಹೋದರು. ಆದರು ಕೆಂಪನ ಕತ್ತಿನ ಗಾಯದಲ್ಲಿ ಹುಳುಗಳು ಬಿದ್ದು ನರಳುತ್ತಿದ್ದು, ಮನೆಯವರಿಗೆಲ್ಲ ಅಳುಬರಿಸುವಂತೆ ಮಾಡಿದ. ಸುಮಾರು ನಾಲ್ಕು ತಿಂಗಳ ನಂತರ ಕೆಂಪನು ಗುಣಮುಖನಾದ ಆದರೆ ನಮ್ಮ ಕೂಗಿಗೆ ಪ್ರತಿಕ್ರಿಯೆ ನೀಡುತ್ತಿರಲ್ಲಿಲ್ಲ. *'ಕೆಂಪಾ. . .ಬಾ ಇಲ್ಲಿ'* ಎಂದರೆ ಬರುತ್ತಿರಲ್ಲಿಲ್ಲ. ಕೂರು ಎಂದರೆ ಅದರ ಪಾಡಿಗೆ ಅದು ತಲೆತಗ್ಗಿಸಿ ಹೋಗುತ್ತಿತ್ತು. ತಲೆ ಎತ್ತಿ ನೋಡಿದರೆ ಬಾಲವನ್ನು ಆಡಿಸುತ್ತಿತ್ತು. ಸುಮ್ಮನೆ ಮನೆಯಂಗಳದ ಜಗುಲಿಯ ಮೇಲೆ ಸದಾ ಮಲಗುತ್ತಿತ್ತು.

ಡಾಕ್ಟರಿಗೆ, ಕೆಂಪಾ ಮೊದಲಿನಂತೆ ಹೇಳುವ ಮಾತು ಕೇಳುತ್ತಿಲ್ಲ ಎಂದು ಹೇಳಿದಾಗ, ಪರೀಕ್ಷೆ ಮಾಡಿನೋಡಿ!, ಕತ್ತಿನ ನರಗಳಿಗೆ ಬಲವಾದ ಪೆಟ್ಟುಬಿದ್ದು ಕೆಂಪನಿಗೆ ಇನ್ನೂ ಮುಂದೆ ಕಿವಿ ಕೇಳಿಸುವುದಿಲ್ಲ. . .! ಎಂದು ಹೇಳಿದರು. ಅಣ್ಣನಿಗ ದುಃಖ ಮುಗಿಲುಮುಟ್ಟಿತು. ಮುಂದಿನ ಬೇಟೆಯ ಪರಕ್ರಮಗಳಿಗೆ ಕೆಂಪ ಸ್ತಬ್ಧನಾಗಿದ್ದ.




# ವಿದ್ಯಾರ್ಥಿಗಾಗಿ ವಿಜ್ಞಾನ

## * ತಾರೆ. .  ತಾರೆ.. ಪುರಾತನ ತಾರೆ.



ರಾತ್ರಿಯ ಆಕಾಶದಲ್ಲಿ ಕಾಣುವ ಸಾವಿರ ಸಾವಿರ ನಕ್ಷತ್ರಗಳನ್ನು ಕಂಡು ಆನಂದಿಸಿದ್ದೇವೆ. ನಿಮಗೆ ಗೊತ್ತೇ ! ನಕ್ಷತ್ರಗಳೂ ಕೂಡ ನಮ್ಮ ಹಾಗೆ ಹುಟ್ಟುತ್ತವೆ ಮತ್ತು ಸಾಯುತ್ತವೆ. ನಮ್ಮ ವಿಶ್ವದ ಅತಿ ಪುರಾತನ ನಕ್ಷತ್ರಗಳಿಂದ ಬಂದ ಬೆಳಕಿನ ಕಣಗಳನ್ನು  ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ನಮ್ಮ ವಿಶ್ವವು ಮಹಾಸ್ಫೋಟದಿಂದ ಹುಟ್ಟಿತು. ಮಹಾಸ್ಫೋಟದ ನಂತರ ನಮ್ಮ ಸೂರ್ಯನ ಗಾತ್ರಕಿಂತ ನೂರಾರು ಪಟ್ಟು ದೊಡ್ಡದಾದ ದೈತ್ಯ ನಕ್ಷತ್ರಗಳು ಉಂಟಾದವು . ಅಂತಹ ದೈತ್ಯ ನಕ್ಷತ್ರ ಬಿಟ್ಟ ಬೆಳಕಿನ ಕಣಗಳು ಖಗೋಳದಳಿರುವ ಅಸಂಖ್ಯ ಗ್ಯಾಲಾಕ್ಸಿಗಳು ಹೊರಸೂಸುವ ಗ್ಯಾಮ ವಿಕಿರಣಗಳ ಪ್ರಕರತೆಯನ್ನು ಕುಗ್ಗಿಸುತ್ತವೆ . ಈ ವಿದ್ಯಮಾನದಿಂದ ವಿಜ್ಞಾನಿಗಳು ಮಹಾಸ್ಫೋಟದ ನಂತರ ಬಂದ ನಕ್ಷತ್ರಗಳು ಈಗಿರುವ ತಾರೆಗಳಿಗಿಂತ ಬಹಳ ಬಿನ್ನವಾಗಿದ್ದವು ಎಂಬುದನ್ನು ಕಂಡು ಹಿಡಿದಿದ್ದಾರೆ. ನಾಸಾದ ಫರ್ಮಿ ದೂರದರ್ಶಕವನು ಬಳಸಿ ಇನ್ನೂ ಹೆಚ್ಚು ಸಂಶೋಧನೆಯನ್ನು ನೆಡಸುತ್ತಿದ್ದಾರೆ



# Hg

ಬರ್ಲಿ ನಮ್ಮ ಮ್ಯಾಕ್ಸ್ ವೆಲ್ಲು
ಮಾಡಸ್ವೀನಿ ನಿಂಕಾ.
ಅಕ್ಷರ-ಗಿಕ್ಷರ ಏನೂ ಇಲ್ಲ
ಬರೀ ಸಮೀಕರಣ
ಸಾಯಿಸ್ತೀನಿ  ನಿನ್ನ.

ವತ್ತಾರೆ ಎಳೆ ಬಿಸಿಲಾಗ್ ನಿಂತಿಕೊಂಡು
ಬಿಸಿನೀರಾಗ ಬಾಯಿ ಮುಕ್ಕಳಿಸಿದಾಂಗೆ ಅಲ್ಲಾ
ಬೆಳಕು-ಕಾಂತ ಕಾಂತ-ಬೆಳಕು
ಬರೀ ಶಕ್ತಿನೇ . . ಮತ್ತೇನೂ ಇಲ್ಲಾ.


ಅಣು ಅಲ್ಲಾ ಕಣೋ ಪರಮಾಣು!
ಕೋಸ ಅಲ್ಲಾರೋ ಜೀವಕೋಶ!
ಜೀವಕೋಶ-ಕೋಶ ಸೇರಿ
ನಿನ್ನ್ ಶ್ವಾಸಕೋಶ!


ಬೆಳ್ಳಗಿಲ್ಲಾ ಬೆಳಕು
ಬಣ್ಣ  ತೋರಸ್ತಿನಿ ಬಾ
ನೈಸಾಗಿಲ್ಲ ಚಂದ್ರ
ಗುಣಿಗಳು ತೋರಸ್ತಿನಿ ಬಾ.


ಕಾಡಿದ್ರೆ ನಾಡು ಅಂತ ನಾನಂದ್ರೇ
ಕಾಡಿದ್ರೆ ಬಾಡು ಅಂತಿಯಾ?!
ಗೊತ್ತೈತೆ ಬಿಡು ನನಗ
ಎಲ್ಲಿ ಚ್ಚುಚ್ಚಾಫ್ ಮಾಡ್ಬೇಕಂತ.


ಐಸಾಕ್ ನಾನಾ ಕರಸ್ಕೋ
ಐನ್ ಸ್ಟೀನ್ ನಾನ ಕೇಳ್ಕೋ
ನೀನ್ ಹುಟ್ಟಿದ್ದೇ ನಕ್ಷತ್ರದಾಗ.!
“ನೀನು ಹುಟ್ಟಿದ ನಕ್ಷತ್ರ” ಅಲ್ಲಾ ಕಣೋ.
“ನೀನು ಹುಟ್ಟಿದ್ದೇ” ನಕ್ಷತ್ರದಾಗ!!


- ಶಂಕರಪ್ಪ.ಕೆ.ಪಿ



ಕಾನನ
JANUARY 2012
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP
© WCG



FEBRUARY 2012
ಕಾನನ
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP
© WCG


MARCH 2012
ಕಾನನ
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP
© WCG



APRIL 2012
ಕಾನನ
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP
© WCG



ಕಾನನ
MAY 2012
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP



ಕಾನನ
JUNE 2012
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP
© WCG



ಕಾನನ
ನಿಸರ್ಗದೆಡೆಗೆ ಪಯಣ
JULY 2012
WILDLIFE CONSERVATION GROUP
© WCG


ಕಾನನ
AUGUST 2012
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP
© WCG


ಕಾನನ
SEPTEMBER 2012
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP


ಕಾನನ
ನಿಸರ್ಗದೆಡೆಗೆ ಪಯಣ
OCTOBER 2012
WILDLIFE CONSERVATION GROUP


ಕಾನನ
NOVEMBER 2012
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP
© WCG


ಕಾನನ
DECEMBER 2012
ನಿಸರ್ಗದೆಡೆಗೆ ಪಯಣ
WILDLIFE CONSERVATION GROUP
© WCG